ಸ್ವಂತ ಪ್ರಕಟನೆ.

ನೋಟಿಸ್.

ನಗರ ಡಿವಿಜ಼ಿ ಡಿಸ್ಟ್ರಿಕ್ಟ್ ಜಡ್ಜ಼ರವರಿಂದ 1895ನೇ ಇಸವಿ ಡಿಸೆಂಬರ್ ತಾರೀಖು 13ರಲ್ಲಿ ಮಾಡಲ್ಪಟ್ಟ ಹುಕುಂ ಅನುಸರಿಸಿ, ಲೇಟ್ ಮೆಸ್ಟರ್ ಅಂಬಿನಕೋಡಿಗೆ ರಂಗಯ್ಯ ಹೆಬ್ಬಾರವರ ಆಸ್ಥಿಗಳನ್ನೆಲ್ಲಾ ಅವರ ಮಗ ಮೈನರ್ ಜಯಗಣಪತಿ ಹೆಬ್ಬಾರರಿಗಾಗಿ ನಾನು ಪೈವಾಟು ನೋಡುವ ಬಗ್ಗೆ ಮ್ಯಾನೇಜರಳಾಗಿ ಕ್ರಮವರಿತು ವೊಕರರ್ ಮಾಡಲ್ಪಟ್ಟು ಇರುವದರಿಂದ ಈ ಮೂಲಕ ಸಮಸ್ತರಿಗೂ ನಾನು ತಿಳಿಯಪಡಿಸುವದೇನಂದರೆ,

ಮೇಲ್ಕಂಡ ಕೋರ್ಟು ಹುಕುಂ ಪ್ರಕಾರಕ್ಕೆ ಸದರೀ ಲೇಟ್ ವೆ॥ ರಂಗಯ್ಯ ಹೆಬ್ಬಾರರ ಯಲ್ಲಾ ಸ್ಥಿರಚರ ಆಸ್ಥಿಗಳ ಸ್ವಾಧೀನವು ಅವರ ಕುಮಾರ ಮೈನರ್ ಸದರೀ ಜಯಗಣಪತಿ ಹೆಬ್ಬಾರನಿಗೋಸ್ಕರ ನನ್ನ ಸ್ವಾಧೀನಕ್ಕೆ ವಳಪಟ್ಟ ಪ್ರಯುಕ್ತ ಸದರೀ ಲೇಟ್ ವೆ॥ ರಂಗಯ್ಯ ಹೆಬ್ಬಾರರವರ ಆಸ್ಥಿಗೆ ಸಲ್ಲಬೇಕಾದ ಹಣ ಕಾಸು ಜಿನಸು ಮಾಲು ವಗೈರೆ ಸಮಸ್ತ ಪದಾರ್ಥಗಳನ್ನ ಈ ತಾರೀಖು ಲಾಗಾಯತು ಆರು ವಾರಗಳ ವಳಗಾಗಿ ನಮಗೆ ಪಾವತಿ ಮಾಡಿ ನಮ್ಮಿಂದ ಕ್ರಮವಾದ ರಶೀತಿ ಪಡಿಯಬೇಕು. ಹಾಗಿಲ್ಲವಾದರೆ ಬೇರೆ ನೋಟಿಸ್ ಕೊಡದೆ ಸದರೀಯವರ ಆಸ್ಥಿಗೆ ಸಲ್ಲಬೇಕಾದ ಯಲ್ಲಾ ಹಣ ಕಾಸು ಜಿನಸಿ ಫಸಲು ವಗೈರೆ ಸಮಸ್ತ ಪದಾರ್ಥಗಳನ್ನ ಬರಮಾಡಿಕೊಳ್ಳಲು ನ್ಯಾಯಸ್ಥಾನಗಳಲ್ಲಿ ವ್ಯವಹರಣೆ ನಡಿಸಲ್ಪಟ್ಟು, ಅದರಿಂದುಂಟಾಗುವ ಖರ್ಚಿಗೂ ಸಹ ದೇಣೀದಾರರು ಗುರಿಯಾಗಲ್ಪಡುವರು.

ಮತ್ತು ಇದರಿಂದ ಲೇಟ್ ವೆ॥ ರಂಗಯ್ಯ ಹೆಬ್ಬಾರರ ಆಸ್ಥಿಯಿಂದ ತಮಗೆ ಸಲ್ಲಬೇಕಾಗಿ ಹೇಳುವ ಸಾಲಗಾರರುಗಳಿಗೆ ಜ಼ಾಹ್ಗರಿಸುವದೇನಂದರೆ,—ತಮಗೆ ಬರಬೇಕೆಂಬ ಲೇಣೆ ತಪ್ಪೀಲ ಸಹಿತ ಈ ತಾರೀಖು ಲಾಗಾಯತು ಮೂರು ತಿಂಗಳುಗಳ ವಳಗಾಗಿ ಅಂಥಾ ಲೇಣೆಗಳ ತನಿಖೆಯಿಂದ ಕ್ರಮವರಿತು ವಿಲೇವಾರಿ ಮಾಡುವಗೋಸ್ಕರ ನಮ್ಮಲ್ಲಿಗಾಗಲಿ ಅಥವಾ ನಮ್ಮ ಲೀಗಲ್ ಅಡ್ವೈಸರ್ ಆದ ಮೈಸೂರು ಚೀಫ್ ಕೋರ್ಟು ಅಡ್ವೊಕೇಟರಾಗಿರುವ ಹೈದರಾಬಾದ್ ಎಸ್. ಎ. ರಾಮಸ್ವಾಮಿ ಅಯ್ಯಂಗಾರ್ ಇವರಲ್ಲಿಗಾಗಲಿ ತಿಳಿಯಪಡಿಸಬೇಕು. ಈ ಪ್ರಕಾರ ಮಾಡದೇನೆ ವೃಥಾ ಕೋರ್ಟಿಗೆ ಹೋಗುವದೇ ಆದರೆ ಅಂಥಾ ವ್ಯವಹರಣೆಗಳಿಂದ ವಾದಿಗಳಿಗೆ ಉಂಟಾಗುವ ಖರ್ಚಿಗೆ ಮೈನರನಾಗಲಿ ಮೈನರಿನ ಆಸ್ಥಿಯೇ ಆಗಲಿ ಜವಾಬ್ದಾರಿಯಾಗಲಾರದಲ್ಲದೆ ಇಂಥಾ ವ್ಯಾಜ್ಯಗಳಲ್ಲಿ ವುತ್ತರವಾದ ಮೂಜುವಗ್ತೋಸ್ಕರ ಮೈನರನಿಗಾಗಲಿ ಆತನ ಆಸ್ಥಿಗಾಗಲಿ ತಗಲುವ ಯಲ್ಲಾ ನಷ್ಟಗಳನ್ನೂ ವಾದಿಗಳಿಂದ ಒರಮಾಡಿಕೊಳ್ಳುವದರಲ್ಲಿ ಬಂದೀತು.

ಅಂ. ಸಾವಿತ್ರಿಅಮ್ಮ.
ಲೇಟ್ ವೆ॥ ರಂಗಯ್ಯ ಹೆಬ್ಬಾರರಮಗ ಮೈನರ್,
ಜಯಗಣಪತಿ ಹೆಬ್ಬಾರನ ಗಾರ್ಡಿಯರ್ ಮತ್ತು ಮ್ಯಾನೇಜರ್,

ಅಂಬಿನಕೋಡಿಗೆ
ತಾರೀಖು 31—12—95ನೇ ಇಸವಿ.

MYSORE GOVERNMENT CENTRAL PRESS, BANGALORE—1896.